ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 137 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ, (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 05-07-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೆಂಗಳೂರು-ಮೈಸೂರು ದಶಪಥ ರಸ್ತೆ, ನಿರ್ಮಾಣದಲ್ಲಿ ಲೋಪದೋಷಗಳು ಹಾಗೂ ಕೆಲವು ಮೂಲ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: (ಪೂರ್ಣ ವಿವರ ನೀಡುವುದು) | ರಾಷ್ಟ್ರೀಯ ಹೆದ್ದಾರಿ-275ರ ಬೆಂಗಳೂರು-ಮೈಸೂರು ದಶಪಥ ರಸ್ತೆ ನಿರ್ಮಾಣ ಕಾಮಗಾರಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (NHAI) ವತಿಯಿಂದ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಕಾಮಗಾರಿ ಕುರಿತಂತೆ ಈ ಕೆಳಕಂಡಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ: |
| ಆ) | ಬಂದಿದ್ದಲ್ಲಿ, ಸದರಿ ಲೋಪದೋಷಗಳು ಹಾಗೂ ಮೂಲ ಸೌಕರ್ಯಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಷ್ಟ್ರೀಯ ಹೆದ್ದಾರಿ-275, ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿನ ನಿರ್ಮಾಣ ಕಾರ್ಯಗಳನ್ನು ಐ.ಆರ್.ಸಿ ನಿರ್ದಿಷ್ಟತೆ ಮತ್ತು ರಿಯಾಯಿತಿ ಒಪ್ಪಂದದ ಪ್ರಕಾರ ಸ್ವತಂತ್ರ ಇಂಜಿನಿಯರ್ ಅವರ ಮೇಲ್ವಿಚಾರಣೆಯಲ್ಲಿ ಕೈಗೊಳ್ಳಲಾಗಿದೆ. ಹಾಗೂ "ಟ್ರಾಫಿಕ್ ಮ್ಯಾನೇಜ್‌ಮೆಂಟ್ ಗೈಡ್‌ಲೈನ್ಸ್ IRC: SP 55:2014 ರ ಸುರಕ್ಷತಾ ಕೈಪಿಡಿಯಂತೆ ಅಗತ್ಯವಿರುವ ಅಗತ್ಯ ಸುರಕ್ಷತಾ ವಿನ್ಯಾಸದ ಸೈನ್ ಬೋರ್ಡಗಳು ಮತ್ತು ಲೇನ್ ಮಾರ್ಕಿಂಗ್ ಅನ್ನು ಒದಗಿಸಲಾಗಿದೆ.<br><br>ಹೆದ್ದಾರಿಯನ್ನು ಉಪಯೋಗಿಸುವ ಸಾರ್ವಜನಿಕರಿಗಾಗಿ ಟೋಲ್ ಪ್ಲಾಜಾದ ಹತ್ತಿರ ಶೌಚಾಲಯಗಳನ್ನು, ಸಂಚಾರ ನೆರವಿನ ಪೋಸ್ಟ್ ಮತ್ತು ಮೆಡಿಕಲ್ ನೆರವಿನ ಪೋಸ್ಟ್‌ನ್ನು ಒದಗಿಸಲಾಗಿದೆ. ಇದರೊಂದಿಗೆ ಹೆದ್ದಾರಿಯಲ್ಲಿ ಅಪಘಾತಗಳು ನಡೆದ ಸ್ಥಳಗಳಲ್ಲಿ ಹಾಜರಾಗಲು ಜೀವರಕ್ಷಕ ವ್ಯವಸ್ಥೆಯನ್ನೊಳಗೊಂಡ ಮತ್ತು ದಾದಿಯರನ್ನು ಒಳಗೊಂಡ 4 ಸಂಖ್ಯೆ ಆಂಬುಲೆನ್ಸ್ ವಾಹನಗಳು (ಒಂದೊಂದು ಪ್ಯಾಕೇಜಿಗೆ 2 ರಂತೆ) ಒದಗಿಸಲಾಗಿದೆ. ಈ ವ್ಯವಸ್ಥೆಯು ಅಪಘಾತ ನಡೆದ 20 ನಿಮಿಷಗಳಲ್ಲಿ ಅಪಘಾತದ ಸ್ಥಳಗಳಿಗೆ ಹಾಜರಾಗುವಂತೆ ವ್ಯವಸ್ಥಿತವಾಗಿದೆ.<br><br>ಅಲ್ಲದೆ ಹೆದ್ದಾರಿಯಲ್ಲಿ ಯಾವುದೇ ವಾಹನ ಕೆಟ್ಟು ನಿಂತಲ್ಲಿ ಅಥವಾ ತುರ್ತು ಪರಿಸ್ಥಿತಿಯಲ್ಲಿ ಹೆದ್ದಾರಿ ಉದ್ದಕ್ಕೂ ಗಸ್ತು ತಿರುಗಲು 4 ಸಂಖ್ಯೆ ಹೆದ್ದಾರಿ ಗಸ್ತು ವಾಹನಗಳನ್ನು (ಒಂದೊಂದು ಪ್ಯಾಕೇಜಿಗೆ 2 ರಂತೆ) 24x7 ಒದಗಿಸಲಾಗಿದೆ. |

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಇ)</td><td>ಮೂಲ ಸೌಕರ್ಯಗಳನ್ನು ನೀಡದೆ ಕಳೆದ 3 ತಿಂಗಳಲ್ಲಿ 2 ಬಾರಿ ಟೋಲ್ ದರವನ್ನು ಅವೈಜ್ಞಾನಿಕವಾಗಿ ಪರಿಷ್ಕರಿಸಿ ಹೆಚ್ಚು ಮಾಡಿರುವುದನ್ನು ಸರಿದೂಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಟೋಲ್ ಶುಲ್ಕವನ್ನು ಭಾರತ ಸರ್ಕಾರದಿಂದ ಗೆಜೆಟ್ ನೋಟಿಫಿಕೇಷನ್ ಹೊರಡಿಸಿದ ನಂತರ ವಸೂಲು ಮಾಡಲಾಗುತ್ತದೆ. ಅದರಂತೆ ರಾಷ್ಟ್ರೀಯ ಹೆದ್ದಾರಿ–275ರ ಬೆಂಗಳೂರಿನಿಂದ ನಿಡಘಟ್ಟ ಭಾಗದಲ್ಲಿ ಟೋಲ್ ಸಂಗ್ರಹವನ್ನು ಭಾರತ ಸರ್ಕಾರದ ಗೆಜೆಟ್ ಅಧಿಸೂಚನೆಯ, 402(ಇ) ದಿನಾಂಕ:25.01.2023ರ ನಂತರ ತೆಗೆದುಕೊಳ್ಳಲಾಗಿದೆ ಮತ್ತು ಬಳಕೆದಾರ ಶುಲ್ಕ ದರಗಳನ್ನು ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮ 2008ರ ನಿಬಂಧನೆಗಳ ಪ್ರಕಾರ 14.03.2023 ರಿಂದ ಜಾರಿಗೆ ಬರುವಂತೆ ತಾತ್ಕಾಲಿಕ ಮುಕ್ತಾಯ ದಿನಾಂಕ:12.12.2022 ರಂದು ಪೂರ್ಣಗೊಂಡ ಕಾಮಗಾರಿಗೆ ಲೆಕ್ಕ ಹಾಕಲಾಗಿದೆ.<br><br>ಇದಲ್ಲದೆ, ಪ್ರತಿ ವರ್ಷ ಏಪ್ರಿಲ್ 1 ರಂದು ಬಳಕೆದಾರರ ಶುಲ್ಕ ದರಗಳ ಪರಿಷ್ಕರಣೆ, ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮ 2008ರ ಷರತ್ತು 5 ರ ಪ್ರಕಾರ, ವಾರ್ಷಿಕ ಪರಿಷ್ಕರಣೆ ಮತ್ತು ಸಂಪೂರ್ಣ ಮಾರಾಟ ಬೆಲೆ ಸೂಚ್ಯಂಕದಲ್ಲಿನ ಬದಲಾವಣೆಗಳ ಆಧಾರದ ಮೇಲೆ ಭಾರತದಾದ್ಯಂತ ಕೈಗೊಳ್ಳಲಾಗುತ್ತದೆ. ಆದಾಗ್ಯೂ, ಮಾರ್ಚ್–2023 ರಲ್ಲಿ ಕರ್ನಾಟಕ ರಾಜ್ಯದಲ್ಲಿ ಘೋಷಿಸಲಾದ ಚುನಾವಣಾ ನೀತಿ ಸಂಹಿತೆಯನ್ನು ಪರಿಗಣಿಸಿ, ಪರಿಷ್ಕರಣೆಯನ್ನು ದಿನಾಂಕ:31.05.2023 ರವರೆಗೆ ಮುಂದೂಡಲಾಗಿತ್ತು ಮತ್ತು ಅದಕ್ಕೆ ಅನುಗುಣವಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ಕಾರ್ಯನೀತಿ ಸುತ್ತೋಲೆಯಂತೆ ಶುಲ್ಕ ದರಗಳ ಪರಿಷ್ಕರಣೆಯನ್ನು ಅನುಮೋದಿಸಲು ಪ್ರಾದೇಶಿಕ ಅಧಿಕಾರಿಯವರಿಗೆ ಪ್ರದತ್ತವಾದ ಅಧಿಕಾರವನ್ನು ನೀಡಿದ್ದು, ಅದಕ್ಕೆ ಅನುಗುಣವಾಗಿ ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮ 2008ರಂತೆ ಬಳಕೆದಾರರ ಶುಲ್ಕವನ್ನು ದಿನಾಂಕ:01.06.2023 ರಂದು ಪರಿಷ್ಕರಿಸಲಾಗಿದೆ.</td></tr>
<tr><td>ಈ)</td><td>ರಸ್ತೆ ಉದ್ಘಾಟನೆ ಮಾಡಿದ ದಿನದಿಂದ ಇದುವರೆವಿಗೂ ಎಷ್ಟು ಅಪಘಾತಗಳು ಸಂಭವಿಸಿವೆ: ಮತ್ತು ಎಷ್ಟು ದರೋಡೆಗಳು ನಡೆದಿವೆ: (ಪೂರ್ಣ ವಿವರ ನೀಡುವುದು)</td><td>ಪೋಲೀಸ್ ಇಲಾಖೆಯಿಂದ ಪಡೆದ ಅಪಘಾತಗಳ ಅಂಕಿ ಅಂಶಗಳಂತೆ ಜನವರಿ–23 ಮಾಹೆಯಿಂದ ಜೂನ್–23 ಅಂತ್ಯದವರೆಗೆ ಒಟ್ಟು 512 ಅಪಘಾತಗಳಾಗಿದ್ದು 123 ಜನ ಮರಣ ಹೊಂದಿರುತ್ತಾರೆ ಹಾಗೂ 585 ಜನರಿಗೆ ತೀವ್ರ ಗಾಯಗಳಾಗಿರುತ್ತದೆ. ಅವಗಳ ವಿವರ ಈ ಕೆಳಕಂಡಂತಿದೆ:–<br><br><u>ರಾಷ್ಟ್ರೀಯ ಹೆದ್ದಾರಿ–275ರ ಬೆಂಗಳೂರು ನಿಂದ ನಿಡಘಟ್ಟ ಸೆಕ್ಷನ್–ಪ್ಯಾಕೇಜ್–I</u><br><br>
<table>
<tr><th>Sl. No</th><th>Month</th><th>Total Accident</th><th>Fatal</th><th>Grievous Injury</th></tr>
<tr><td>1.</td><td>Jan.2023</td><td>38</td><td>8</td><td>47</td></tr>
<tr><td>2.</td><td>Feb.2023</td><td>45</td><td>7</td><td>46</td></tr>
<tr><td>3.</td><td>Mar.2023</td><td>38</td><td>13</td><td>43</td></tr>
<tr><td>4.</td><td>Apr.2023</td><td>41</td><td>11</td><td>60</td></tr>
<tr><td>5.</td><td>May.2023</td><td>55</td><td>15</td><td>50</td></tr>
<tr><td>6.</td><td>Jun.2023</td><td>28</td><td>3</td><td>35</td></tr>
<tr><td></td><td>TOTAL</td><td>245</td><td>57</td><td>281</td></tr>
</table></td></tr>
</table>

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td></td><td></td><td><u>ರಾಷ್ಟ್ರೀಯ ಹೆದ್ದಾರಿ-275ರ ನಿಡಘಟ್ಟ ದಿಂದ ಮೈಸೂರು ಸೆಕ್ಷನ್-ಪ್ಯಾಕೇಜ್-2</u>
<table>
<tr><th>Sl.No</th><th>Month</th><th>Total Accident</th><th>Fatal</th><th>Grievous Injury</th></tr>
<tr><td>1.</td><td>Jan.2023</td><td>55</td><td>11</td><td>63</td></tr>
<tr><td>2.</td><td>Feb.2023</td><td>48</td><td>9</td><td>53</td></tr>
<tr><td>3.</td><td>Mar.2023</td><td>38</td><td>13</td><td>43</td></tr>
<tr><td>4.</td><td>Apr.2023</td><td>41</td><td>11</td><td>60</td></tr>
<tr><td>5.</td><td>May.2023</td><td>55</td><td>15</td><td>50</td></tr>
<tr><td>6.</td><td>Jun.2023</td><td>30</td><td>7</td><td>35</td></tr>
<tr><td></td><td>TOTAL</td><td>267</td><td>66</td><td>304</td></tr>
</table>
ಹೆದ್ದಾರಿಯಲ್ಲಿ ಒದಗಿಸಲಾದ ಚೈನ್‌ಲಿಂಕ್ ಫೆನ್ಸಿಂಗ್ ಕಳ್ಳತನದ ಘಟನೆಗಳು ನಡೆದಿದ್ದು, ಕಳ್ಳತನದ ಘಟನೆ ನಡೆದಾಗ ಪೊಲೀಸರಿಗೆ ದೂರು ನೀಡಲು ಕ್ರಮ ವಹಿಸಲಾಗುತ್ತಿದೆ ಹಾಗೂ ಚೈನ್‌ಲಿಂಕ್ ಫೆನ್ಸಿಂಗ್ ಅನ್ನು ನಿಯಮಿತವಾಗಿ ರಿಯಾಯಿತಿದಾರರಿಂದ ಸರಿಪಡಿಸಲಾಗುತ್ತಿದೆ.</td></tr>
<tr><td>ಊ)</td><td>ಸದರಿ ರಸ್ತೆಯಲ್ಲಿ ಅಪಘಾತಗಳು ನಡೆಯುತ್ತಿರುವುದಕ್ಕೆ ಮೂಲ ಕಾರಣಗಳೇನು; ಈ ಅಪಘಾತಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td><td>ಅಪಘಾತಗಳಿಗೆ ಲೇನ್ ಶಿಸ್ತಿನ ಕೊರತೆ ಮತ್ತು ನಿಗದಿತ ವೇಗದ ಮಿತಿಯಾದ 100 KMPH ಮೀರುವ ವಾಹನಗಳು ಪ್ರಮುಖ ಕಾರಣವಾಗಿರುತ್ತವೆ. ನಿಧಾನವಾಗಿ ಚಲಿಸುವ ವಾಹನಗಳು (2 ಚಕ್ರಗಳು/3 ಚಕ್ರಗಳು) ಮತ್ತು ಹೆಚ್ಚಿನ ವೇಗದ ವಾಹನ ಸಂಚಾರದ ನಡುವಿನ ಸಂಘರ್ಷವನ್ನು ಕಡಿಮೆ ಮಾಡಲು, ಮುಖ್ಯ ರಸ್ತೆಯಲ್ಲಿ 2 ಚಕ್ರ ಮತ್ತು 3 ಚಕ್ರಗಳ ವಾಹನಗಳನ್ನು ನಿಷೇಧಿಸುವ ಕುರಿತು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಪರಿಶೀಲನೆಯಲ್ಲಿದೆ. ಇದಲ್ಲದೆ, ರಸ್ತೆ ಬಳಕೆದಾರರಿಗೆ ವೇಗದ ಮಿತಿಯ ಬಗ್ಗೆ ಅರಿವು ಮೂಡಿಸಲು ಮತ್ತು ಅಪಘಾತಗಳನ್ನು ತಡೆಗಟ್ಟಲು ಅಲ್ಪಾವಧಿಯ ಕ್ರಮಗಳಾಗಿ ಹೆದ್ದಾರಿಯಲ್ಲಿ ಅನುಸರಿಸಬೇಕಾದ ಇತರ ಸಂಚಾರ ನಿಯಮಗಳ ಬಗ್ಗೆ ತಿಳಿಸಲು ಸಂಕೇತಗಳು ಮತ್ತು ಗುರುತುಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.</td></tr>
</table>

ಕಡತ ಸಂಖ್ಯೆ: ಲೋಇ 129 ಸಿಎನ್‌ಹೆಚ್ 2023 (ಇ)

(ಸತೀಶ್ ಲ. ಜಾರಕೀಹೊಳಿ)
ಲೋಕೋಪಯೋಗಿ ಸಚಿವರು

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 19 (114) |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 05-07-2023. |
| ಉತ್ತರಿಸುವ ಸಚಿವರು | : | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ಬೀದರ ಜಿಲ್ಲೆಯಲ್ಲಿ ಎಷ್ಟು ಆಸ್ತಿಗಳ ಅತಿಕ್ರಮಣದ ಕುರಿತು ವಕ್ಫ್ ಬೋರ್ಡ್‌ನಲ್ಲಿ ಜಿಲ್ಲಾ ಹಾಗೂ ಉಚ್ಚ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಾಗಿವೆ; ಅವು ಎಷ್ಟು ವರ್ಷದಿಂದ ಬಾಕಿ ಇವೆ ಹಾಗೂ ಅವು ಯಾವ ಹಂತದಲ್ಲಿವೆ; | ಬೀದರ ಜಿಲ್ಲೆಯ ವಕ್ಫ್ ಆಸ್ತಿಗಳ ಅತಿಕ್ರಮಣದ ಕುರಿತು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಒಟ್ಟು 197 ಪ್ರಕರಣಗಳು ದಾಖಲಾಗಿದ್ದು, ಸದರಿ ಪ್ರಕರಣಗಳಲ್ಲಿ 73 ಪ್ರಕರಣಗಳು ವಿಲೇವಾರಿ ಮಾಡಲಾಗಿದೆ. 124 ಪ್ರಕರಣಗಳು 2016, 2021 ಮತ್ತು 2022ನೇ ಸಾಲಿನಿಂದ ವಿಚಾರಣಾಧಿಕಾರಿಗಳು/ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವರ ಮುಂದೆ ಸಾಕ್ಷ್ಯಗಳ ಮತ್ತು ವಾದಗಳಿಗಾಗಿ ಬಾಕಿ ಇರುತ್ತವೆ.<br>ಮುಂದುವರೆದು ಜಿಲ್ಲಾ ಹಾಗೂ ಉಚ್ಚ ನ್ಯಾಯಾಲಯಗಳಲ್ಲಿ ಅತಿಕ್ರಮಣದ ಕುರಿತು ಪ್ರಕರಣಗಳು ಬಾಕಿ ಇರುವುದಿಲ್ಲ. |
| ಆ. | ಹಲವು ವರ್ಷಗಳಿಂದ ಪ್ರಕರಣಗಳು ಬಾಕಿ ಇರಲು ಕಾರಣವೇನು; ಇದಕ್ಕೆ ಹೊಣೆಗಾರರು ಯಾರು; | ಮೇಲಿನ ಪ್ರಕರಣಗಳು ಅರೆ-ನ್ಯಾಯಾಂಗ ಸ್ವರೂಪದ್ದಾಗಿದ್ದು, ತನಿಖಾಧಿಕಾರಿ ರವರು ಎರಡೂ ಕಡೆಯ ವಾದಗಳನ್ನು ಆಲಿಸಲು ಸಾಕಷ್ಟು ಸಮಯಾವಕಾಶವನ್ನು ನೀಡಬೇಕಾಗಿರುವುದರಿಂದ ಪ್ರಕರಣಗಳು ಬಾಕಿ ಉಳಿದಿರುತ್ತವೆ. |
| ಇ. | ಅತಿಕ್ರಮಣ ಮಾಡಲು ಸಹಕರಿಸಿದಂತಹ ಅಧಿಕಾರಿಗಳ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿವೆ;ಅಂತಹ ಅಧಿಕಾರಿಗಳು ಯಾರು; ಹಾಗೂ ಇಲಾಖೆಯಲ್ಲಿ ಎಷ್ಟು ಹುದ್ದೆಗಳಿವೆ;ಅವುಗಳಲ್ಲಿ ಎಷ್ಟು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ;ಎಷ್ಟು ಖಾಲಿ ಇವೆ? | ಅತಿಕ್ರಮಣಕ್ಕೆ ಸಂಬಂಧಿಸಿದಂತೆ ಪ್ರಕರಣಗಳು ವಿಚಾರಣಾ ಹಂತದಲ್ಲಿ ಇರುವುದರಿಂದ ಪ್ರಸ್ತುತ ಅಧಿಕಾರಿಗಳ ವಿರುದ್ಧ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.<br>ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಒಟ್ಟು 355 ಮಂಜೂರಾದ ಹುದ್ದೆಗಳಿವೆ, ಇದರಲ್ಲಿ 131 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ 224 ಹುದ್ದೆಗಳು ಖಾಲಿ ಇವೆ. (ವಿವರ ಅನುಬಂಧ-1 ರಲ್ಲಿ ನೀಡಲಾಗಿದೆ). |

ಸಂಖ್ಯೆ: **MWD 49 LMQ 2023**

(ಬಿ.ಝೆಡ್.ಜ಼ಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು